ಪ್ರಾಯೋಗಿಕವಾಗಿ ದಾಂಡೇಲಿ ಡಿಪೊದಲ್ಲಿ ನಾಳೆಯಿಂದ ಜಾರಿ

# ಟಿಂಬರ್ ಮಾರಾಟಕ್ಕೂ ಬಂತು ಇ–ಹರಾಜು

• ಬಿ.ಎನ್.ಶ್ರೀಧರ

**ಹುಬ್ಬಳ್ಳಿ:** ಎಪಿಎಂಸಿಗಳಲ್ಲಿ ಕೊಬ್ಬರಿ, ಅರಿಸಿನ, ತೊಗರಿ, ಅಡಿಕೆ ಇತ್ಯಾದಿ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಮಾರಾಟಕ್ಕೆ ಇದ್ದ ಆನ್‌ಲೈನ್ ಹರಾಜು ವ್ಯವಸ್ಥೆಯನ್ನು ಈಗ ಮರದ ದಿಮ್ಮಿಗಳ (ಟಿಂಬರ್) ಮಾರಾಟಕ್ಕೂ ವಿಸ್ತರಿಸಲಾಗಿದೆ.

ಅರಣ್ಯ ಇಲಾಖೆಯ ದಾಂಡೇಲಿ ಡಿಪೊದಲ್ಲಿ ಪ್ರಾಯೋಗಿಕವಾಗಿ ಈ ವ್ಯವಸ್ಥೆ ಜಾರಿಯಾಗಲಿದೆ. ಇದೇ 19ರಂದು ಆನ್‌ಲೈನ್‌ನಲ್ಲಿ ಹರಾಜು ನಡೆಯಲಿದ್ದು ಇದಕ್ಕಾಗಿ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಕೃಷಿ ಉತ್ಪನ್ನಗಳ ಇ-ಹರಾಜಿನಲ್ಲಿ ಯಶಸ್ಸು ಕಂಡಿರುವ ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಇ-ಮಾರ್ಕೆಟಿಂಗ್ ಸರ್ವೀಸಸ್ (ರೆಮ್ಸ್) ಸಂಸ್ಥೆಯೇ ಮರದ ದಿಮ್ಮಿಗಳ ಹರಾಜಿಗೂ ಆನ್‌ಲೈನ್ ವೇದಿಕೆ ಕಲ್ಪಿಸಿದೆ. ಈ ಸಂಬಂಧ ಅರಣ್ಯ ಇಲಾಖೆ ಜತೆ ಒಪ್ಪಂದವೂ ಆಗಿದೆ.

ಮಾಮೂಲಿ ಸೌದೆಯಿಂದ ಹಿಡಿದು ಬೆಲೆ ಬಾಳುವ ಬೀಟೆ, ತೇಗ ಸೇರಿದಂತೆ ಇನ್ನೂ ಅನೇಕ ಬಗೆಯ ಮರದ ದಿಮ್ಮಿಗಳ 1,052 ಗುಡ್ಡೆ ಇದೆ. ಒಂದೊಂದು ಗುಡ್ಡೆಯೂ ₹100 ಯಿಂದ ₹10 ಲಕ್ಷದವರೆಗೂ ಬೆಲೆಬಾಳುತ್ತದೆ. ಯಾವ ಗುಡ್ಡೆ ಬೇಕೊ ಅದನ್ನು ಆನ್‌ಲೈನ್‌ನಲ್ಲಿ ಬಿಡ್ ಮಾಡಿ ಖರೀದಿ ಮಾಡಬಹುದು ಎನ್ನುತ್ತಾರೆ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂಪನ್ಮೂಲ) ಬಿ.ಕೆ.ದೀಕ್ಷಿತ್.

‘ಇದುವರೆಗೂ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುತ್ತಿತ್ತು. ಅದರಲ್ಲಿ ಪಾರದರ್ಶಕತೆ ಇಲ್ಲ ಎನ್ನುವ ಆರೋಪಗಳು ಕೇಳಿಬಂದಿತ್ತು. ಇಷ್ಟಕ್ಕೂ ಪ್ರತಿಯೊಂದು ದಿಮ್ಮಿಗಳ ಗುಡ್ಡೆ ಮುಂದೆ ಖುದ್ದಾಗಿ ಹೋಗಿಯೇ ಹರಾಜು ಹಾಕಬೇಕಿತ್ತು. ಹೀಗಾಗಿ ವಿಳಂಬ ಆಗುತ್ತಿತ್ತು. ಅಲ್ಲದೆ, ಖುದ್ದು ಹಾಜರಿದ್ದ ಕೆಲವರಷ್ಟೇ ಹರಾಜಿನಲ್ಲಿ ಭಾಗವಹಿಸುತ್ತಿದ್ದರು. ಹೆಚ್ಚು ಸ್ಪರ್ಧೆ ಇಲ್ಲದ ಕಾರಣ ಉತ್ತಮ ಬೆಲೆಯೂ ಸಿಗುತ್ತಿರಲಿಲ್ಲ’ ಎಂದು ಅವರು ಇ-ಹರಾಜು ವ್ಯವಸ್ಥೆ ಜಾರಿಗೆ ಕಾರಣಗಳನ್ನು ನೀಡುತ್ತಾರೆ.

‘ದಿಮ್ಮಿಗಳ ಮಾರಾಟಕ್ಕೆ ಇಲಾಖೆಯಲ್ಲಿ ಇ-ಟಿಂಬರ್ ಸಾಫ್ಟ್‌ವೇರ್ ಇದ್ದರೂ ಅದು ಮಾರಾಟಗಾರ ಮತ್ತು ಖರೀದಿದಾರರ ಖುದ್ದು ಹಾಜರಾತಿಯನ್ನು ಬೇಡುತ್ತದೆ. ಅಂತಹ ವ್ಯವಸ್ಥೆಯಿಂದ ಪಾರದರ್ಶಕತೆ ಬರಲು ಸಾಧ್ಯ ಇಲ್ಲ. ಈಗಿನ ಆನ್‌ಲೈನ್ ಹರಾಜಿನಿಂದ ಯಾರ ಹಾಜರಾತಿಯ ಅಗತ್ಯ ಇರುವುದಿಲ್ಲ’ ಎನ್ನುತ್ತಾರೆ ದೀಕ್ಷಿತ್.

**ಬಿಡ್ ಮಾಡುವುದು ಯಾರು?:** ಅರಣ್ಯ ಇಲಾಖೆಯಲ್ಲಿ ₹ 20 ಸಾವಿರ ಠೇವಣಿ ಇಟ್ಟು ಹೆಸರು ನೋಂದಣಿ ಮಾಡಿಕೊಂಡವರು ಮಾತ್ರ ಇ-ಹರಾಜಿನಲ್ಲಿ ಭಾಗವಹಿಸಬಹುದು. ಇದುವರೆಗೂ 50ಕ್ಕೂ ಹೆಚ್ಚು ಮಂದಿ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ. ಬೆಂಗಳೂರು, ಶಿವಮೊಗ್ಗ, ದಕ್ಷಿಣ ಕನ್ನಡ ಮಾತ್ರವಲ್ಲದೆ ಕೇರಳ ಸೇರಿದಂತೆ ಇತರ ರಾಜ್ಯಗಳ ಮರ ವ್ಯಾಪಾರಿಗಳೂ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ. ಇ-ಹರಾಜು ಇದೇ 19 ರಂದು ನಡೆಯಲಿದ್ದು ಮಧ್ಯಾಹ್ನ 12ರವರೆಗೆ ಹೆಸರು ನೋಂದಣಿಗೆ ಅವಕಾಶವಿದೆ.

‘ನೋಂದಣಿ ಬಳಿಕ ಅವರಿಗೆ ಮರದ ವಿವರಗಳನ್ನು ಪಡೆಯಲು ಆನ್‌ಲೈನ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. 1,052 ಗುಡ್ಡೆಗಳಲ್ಲಿನ ಮರದ ಹೆಸರು, ಅದರ ಗುಣಮಟ್ಟ ಇತ್ಯಾದಿ ತಾಂತ್ರಿಕ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಹಾಕಲಾಗಿದೆ. ಅವುಗಳನ್ನು ನೋಡಿ ಅಥವಾ ಖುದ್ದು ಪರಿಶೀಲಿಸಿ ಇ-ಹರಾಜಿನಲ್ಲಿ ಭಾಗವಹಿಸಬಹುದು’ ಎನ್ನುತ್ತಾರೆ ರೆಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಆರ್.ಮನೋಜ್.

‘ಹೆಚ್ಚಿನ ಬೆಲೆ ಕೋಟ್ ಮಾಡಿದವರಿಗೆ ಬಿಡ್ ಹೋಗುತ್ತದೆ. ಕೆಲವೊಮ್ಮೆ ಅತಿ ಹೆಚ್ಚಿನ ಬೆಲೆ ಕೋಟ್ ಮಾಡಿದವರು ಒಬ್ಬರಿಗಿಂತ ಹೆಚ್ಚು ಮಂದಿ (ಉದಾ ₹10 ಸಾವಿರಕ್ಕೆ ಕೋಟ್ ಮಾಡಿದವರು) ಇದ್ದಾಗ ಅಂತಹ ಸಂದರ್ಭಗಳಲ್ಲಿ ಯಾರು ಮೊದಲು ಕೋಟ್ ಮಾಡಿರುತ್ತಾರೋ ಅಂತವರಿಗೆ ಬಿಡ್ ಹೋಗುತ್ತದೆ’ ಎಂದು ದೀಕ್ಷಿತ್ ವಿವರಿಸುತ್ತಾರೆ.

‘ಹರಾಜು ಪ್ರಕ್ರಿಯ ಮುಗಿದ ತಕ್ಷಣವೇ ಅದರ ಪೂರ್ಣ ವಿವರಗಳನ್ನು ಆನ್‌ಲೈನ್‌ನಲ್ಲಿ ಹಾಕಲಾಗುತ್ತದೆ. ಬಿಡ್ ಪಡೆಯಲು ವಿಫಲರಾದವರಿಗೆ 24 ಗಂಟೆ ಒಳಗೆ ಆನ್‌ಲೈನ್‌ನಲ್ಲೇ ಠೇವಣಿ ಹಣ ಹಿಂದಿರುಗಿಸಲಾಗುತ್ತದೆ. ಬಿಡ್ ಗಳಿಸಿದವರು 24 ಗಂಟೆ ಒಳಗೆ ಹಣ ಕಟ್ಟಬೇಕು. ನಂತರ ಮರದ ದಿಮ್ಮಿಗಳನ್ನು ಸಾಗಿಸಲು ಅರಣ್ಯ ಇಲಾಖೆ ಅನುಮತಿ ನೀಡುತ್ತದೆ’ ಎಂದು ಮನೋಜ್ ತಿಳಿಸಿದರು.

**ಸ್ವಂತಕ್ಕೂ ಖರೀದಿಸಬಹುದು:** ಮನೆ ಕಟ್ಟುವವರೂ ತಮಗೆ ಬೇಕಾದ ಮರದ ದಿಮ್ಮಿಗಳನ್ನು ಆನ್‌ಲೈನ್‌ನಲ್ಲಿ ಖರೀದಿ ಮಾಡಬಹುದು. ಅವರು ಕೂಡ ಠೇವಣಿ ಇಟ್ಟು, ಹೆಸರು ನೋಂದಣಿ ಮಾಡಿಕೊಳ್ಳಬೇಕು. ಆದರೆ, ವರ್ತಕರಿಗೆ ಇರುವಷ್ಟು ನಿರ್ಬಂಧಗಳು ಸ್ವಂತಕ್ಕೆ ಖರೀದಿ ಮಾಡುವ ನಾಗರಿಕರಿಗೆ ಇರುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ.



ದಾಂಡೇಲಿಯ ಅರಣ್ಯ ಇಲಾಖೆಯ ಡಿಪೊದಲ್ಲಿ ಇ–ಹರಾಜಿಗೆ ಜೋಡಿಸಿಟ್ಟಿರುವ ಮರದ ದಿಮ್ಮಿ

## ಇ–ಹರಾಜಿಗೆ ವಿರೋಧ

**ದಾಂಡೇಲಿ:** ಮರದ ದಿಮ್ಮಿಗಳನ್ನು ಇ-ಹರಾಜು ಮೂಲಕ ಮಾರಾಟ ಮಾಡಲು ಮುಂದಾಗಿರುವ ಅರಣ್ಯ ಇಲಾಖೆ ಕ್ರಮವನ್ನು ದಾಂಡೇಲಿ ಕಾರ್ಪೆಂಟರ್ ಸಂಘ ವಿರೋಧಿಸಿದೆ.

ಇದನ್ನು ತಕ್ಷಣ ನಿಲ್ಲಿಸದಿದ್ದರೆ ಹರಾಜು ಪ್ರಕ್ರಿಯೆಯನ್ನು ಸಾಮೂಹಿಕವಾಗಿ ಬಹಿಷ್ಕರಿಸಲಾಗುವುದು ಎಂದು ಸಂಘದ ಕಾರ್ಯಾಧ್ಯಕ್ಷ ರಫೀಕ್ ಖಾನ್ ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಸಿದರು.

‘ಹೊಸ ವ್ಯವಸ್ಥೆಯ ಬಗ್ಗೆ ನಮಗೆ ಮುನ್ಸೂಚನೆ ಕೊಟ್ಟಿಲ್ಲ. ಅದು ಪಾರದರ್ಶಕವಾಗಿಯೂ ಇಲ್ಲ’ ಎಂದು ಅವರು ದೂರಿದರು.

ರಾಜ್ಯದಲ್ಲಿ ಅರಣ್ಯ ಇಲಾಖೆಯ 40ಕ್ಕೂ ಹೆಚ್ಚು ಡಿಪೊಗಳು ಇದ್ದು, ಅಲ್ಲಿಯೂ ಇ-ಹರಾಜು ಮೂಲಕ ಮರದ ದಿಮ್ಮಿಗಳನ್ನು ಮಾರಾಟ ಮಾಡಲಾಗುವುದು.

**ಬಿ.ಕೆ.ದೀಕ್ಷಿತ್**
ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂಪನ್ಮೂಲ)

### ಅಂಕಿ–ಅಂಶ

**1,052**
ಗುಡ್ಡೆಗಳಲ್ಲಿ ಮರದ ದಿಮ್ಮಿ ಲಭ್ಯ

**2,135**
ಕ್ಯುಬಿಕ್ ಮೀಟರ್ ದಿಮ್ಮಿ ಹರಾಜು

ಇ–ಹರಾಜು ವೇಳೆ: ಬೆಳಿಗ್ಗೆ 9ರಿಂದ ಸಂಜೆ 4.30ರವರೆಗೆ

### ವೆಬ್‌ಸೈಟ್ ವಿಳಾಸ

ನೋಂದಣಿ, ಮರದ ದಿಮ್ಮಿಗಳ ವಿವರಗಳಿಗೆ
https://trader.remsl.in.
ಇ-ಹರಾಜಿಗೆ
https://ka.remsl.in